# ಸೈಸಲಾರೆನೆ ಗೋಪಿ ನಿನ್ನ ಮಗನ ಲೂಟಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 65.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 569.
3. **Note:** Lyrics mentioned without highlights are as per Ref. 1 and the lyrics given in yellow highlights are as per Ref. 2. The wordings in Ref. 2 are more apt with proper meaning.
4. **Note:** Ankita is different in both the above reference books. We have considered Ref. 2 as standard and taken that Ankita for listing.

| | |
|---|---|
| ರಾಗ: ಬೇಗಡೆ ತಾಳ: ಛಾಪು | ರಾಗ: ಬಿಲಹರಿ ತಾಳ: ಝಂಪೆ |
| ಸೈಸಲಾರೆನೆ ಗೋಪಿ ನಿನ್ನ ಮಗನ ಲೂಟಿ,<br>ಏನೆಂದು ಪೇಳಮ್ಮ ‖ ಪ ‖ | ಸೈಸಲಾರೆನೆ ಗೋಪಿ ನಿನ್ನ ಮಗನ ಲೂಟಿ<br>ಏನೆಂದು ಪೇಳಲಮ್ಮ |
| ವಾಸುದೇವನು ಬಂದು ಮೋಸದಿಂದಲಿ ಎನ್ನ<br>ವಾಸವ ಸೆಳಕೊಂಡು ಓಡಿ ಪೋದನಮ್ಮ ‖ ಅಪ ‖ | ವಾಸುದೇವನು ಬಂದು ಮೋಸದಿಂದಲಿ ಎನ್ನ<br>ವಾಸವ ಸೆಳಕೊಂಡು ಓಡಿ ಪೋದನಮ್ಮ |
| ದೇವರ ಪೆಟ್ಟಿಗೆ ತೆಗೆದು ಶಾಲಗ್ರಾಮ<br>ಸಾವಿರ ನುಂಗುವನೆ<br>ಭಾವಜನಯ್ಯ ಇದೇನೆಂದರೆ ನಿಮ್ಮ<br>ಕಾವ ದೇವರು ನಾ ಕೇಳಿಕೋ ಎಂಬನೆ ‖ 1 ‖ | ದೇವರ ಪೆಟ್ಟಿಗೆ ತೆಗೆದು ಸಾಲಿಗ್ರಾಮ<br>ಸಾವಿರ ನುಂಗುವನೆ<br>ಭಾವಜನಯ್ಯಇದೇನೆಂದರೆ ನಿಮ್ಮ<br>ಕಾವ ದೇವರು ನಾನು ಕೇಳಿಕೊ ಎಂಬನೆ |
| ಅಗ್ರೋದಕ ತಂದು ಜಗಲಿ ಮೇಲಿಟ್ಟರೆ<br>ವೆಗ್ಗಳದಲಿ ಕುಡಿವ<br>ಮಂಗಳ ಮಹಿಮನ ಮೀಸಲೆಂದರೆ ನಿಮ್ಮ<br>ಮಂಗಳ ಮಹಿಮನ ಅಪ್ಪ ನಾನೆಂಬನೆ ‖ 2 ‖ | ಅಗ್ರೋದಕ ತಂದು ಜಗುಲಿ ಮೇಲಿಟ್ಟರೆ<br>ವೆಗ್ಗಳದಲಿ ಕುಡಿವ<br>ಮಂಗಳ ಮಹಿಮನ ಮಿಸಲೆಂದರೆ ನಿಮ್ಮ<br>ಮಂಗಳ ಮಹಿಮನ ಅಪ್ಪ ನಾನೆಂಬುವ |
| ಅಟ್ಟಡುಗೆಯನೆಲ್ಲ ಉಚ್ಚಿಷ್ಟ ಮಾಡಿ<br>ಅಷ್ಟು ತಾ ಬಳಿದುಂಬನೆ<br>ಕೃಷ್ಣದೇವರ ನೈವೇದ್ಯವೆಂದರೆ ನಿಮ್ಮ<br>ಇಷ್ಟ ದೇವರು ತೃಪ್ತನಾದನೆಂತೆಂಬನೆ ‖ 3 ‖ | ಅಟ್ಟಡಿಗೆಯನೆಲ್ಲ ಉಚ್ಚಿಷ್ಟವ ಮಾಡಿ<br>ಅಷ್ಟು ತಾ ಬಳಿದುಂಬನೆ<br>ವಿಷ್ಣು ದೇವರ ನೈವೇದ್ಯವೆಂದರೆ ನಿಮ್ಮ<br>ಇಷ್ಟ ದೇವರು ತೃಪ್ತನಾದನೆಂತೆಂಬುವ |

| | |
|---|---|
| ಋತುವಾದ ಬಾಲೆಯರು ಪತಿಯಡೆಗೆ ಪೋಪಾಗ | ಋತುವಾದ ಬಾಲೆಯರು ಪತಿಯೆಡೆ ಪೋಪಾಗ |
| ಪಥದೊಳಗಡಗಿರುವ | ಕೃತಕದಿಂದಡಗಿಹನೆ |
| ಮತಿಗೆಟ್ಟ ಹೆಣ್ಣೆ ಸುಂಕವ ಕೊಡು ಎನುತಲಿ | ಮತಿಗೆಟ್ಟ ಪೆಣ್ಣೆ ಸುಂಕವ ಕೊಡು ಎನುತಲಿ |
| ರತಿಯಿಂದ ಮಾನವ ಸೂರೆಗೊಂಬುವನೆ     \|\| 4 \|\| | ಪ್ರತಿಯಾಗಿ ಮಾರನ ಸೂರೆಗೊಂಬುವನೆ |
| | |
| ಅಚ್ಚ ಪಾಲ್ಮೊಸರು ನವನೀತವು ಮಜ್ಜಿಗೆ | ಅಚ್ಚ ಪಾಲು – ಮೊಸರು ನವನೀತ ಮಜ್ಜಿಗೆ |
| ರಚ್ಚೆ ಮಾಡಿ ಕುಡಿವ | ರಚ್ಚೆಮಾಡಿ ಕುಡಿವ |
| ಸ್ವಚ್ಛ ಶ್ರೀ ಪುರಂದರ ವಿಟ್ಠಲ ರಾಯನ | ಅಚ್ಚ ಪುರಂದರ ವಿಠಲ ರಾಯನ |
| ಇಚ್ಛೆಯಿಂದಲಿ ನಿನ್ನ ಮನೆಗೆ ಕರೆದು ಕೊಳ್ಳೆ     \|\| 5 \|\| | ಇಚ್ಛೆಯಿಂದಲಿ ನಿಮ್ಮ ಮನೆಗೆ ಕರೆದುಕೊಳ್ಳಿ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಾಲಕೃಷ್ಣನ ಕಿಡಿಗೇಡಿತನಕ್ಕೆ ಬೇಸತ್ತ ಗೋಪಿಯರು ಯಶೋದೆಗ ಬಳಿಗೆ ಬಂದು, ದೂರು ಹೇಳುವ ಮಾತುಗಳಿವು.

**ವಾಸ** = ಬಟ್ಟೆ

**ಭಾವಜನಯ್ಯ** = ಕಾಮನ ತಂದೆ

**ವೆಗ್ಗಳ** = ಶ್ರೇಷ್ಠ, ಪ್ರಮುಖ, ಅತಿಶಯ

**ವೆಗ್ಗಳಿಸು** = ಅಳತೆ ಮೀರು, ಸಾಕಷ್ಟಾಗು,

**ಅಪ್ಪ** = ಮಿಕ್ಕಿದವ, ಶ್ರೇಷ್ಠ

**ಉಚ್ಚಿಷ್ಟ** = ಎಂಜಲು

**ಇಷ್ಟ ದೇವರು : -** ಗ್ರಾಮ ದೇವರು, ಕುಲದೇವರು ಹಾಗು ಇಷ್ಟ ದೇವರೆಂಬ ಭೇದಗಳಿವೆ. ತಾನೇ ಸ್ವತಃ ಆರಿಸಿಕೊಂಡು, ನಡೆದುಕೊಳ್ಳುವ ದೇವತೆಗೆ ಇಷ್ಟ ದೇವತೆಯೆಂಬ ಹೆಸರಿದೆ.

**ರಚ್ಚೆ** = ಗೊಂದಲ

**Classification:** Keerthane
**Ankita:** sri purandara vittala
**Location:** NA
**Category:** Krishna Leele
**Sub-Category:** Krishna, yashode, gopi, maga, Vasudeva, mosa, saligrama, niru, theertha, mangala, tande, naivedya, hennu, halu, benne, mane,
**Pravachana:** NA
**Explanation:** NA